# ಯೋಗ–ಕ್ಷೇಮ

ಕಳೆದ ಶತಮಾನದ ಪ್ರಾರಂಭಕ್ಕೆ 'ಪತ್ರಸಾಹಿತ್ಯ' ವಿಪುಲವಾಗಿತ್ತು. ಕೌಟುಂಬಿಕ ಪತ್ರಗಳು, ಹಿರಿಯರ ಪತ್ರಗಳು, ಸಾಹಿತಿ–ವಿದ್ವಾಂಸರ ಪತ್ರಗಳು, ಹೀಗೆ ಬಗೆಬಗೆಯ ಪತ್ರಗಳನ್ನು ನಾವು ಕಾಣುತ್ತಿದ್ದೆವು. ವಿದ್ಯುನ್ಮಾನವು ವಿಪುಲವಾಗಿ ಬೆಳೆದಂತೆ ಪತ್ರಗಳು ಕ್ರಮಶಃ ಇಳಿಮುಖವಾದವು. ಈಗ ಎಲ್ಲವೂ ಆನ್‌ಲೈನ್ ಹೆದ್ದಾರಿಗೆ ಬಂದು ಕೀಲಿಸಿಕೊಂಡಿವೆ! ಅವು ಎಡವಿಬಿದ್ದು ಹೋಗಿವೆ. ಮನೆಯ ಹಿರಿಯರು ಬರೆಯುತ್ತಿದ್ದ ಪತ್ರಗಳಲ್ಲಿ 'ಉಭಯ ಕುಶಲೋಪರಿ' ಇರುತ್ತಿತ್ತು. ಯೋಗಕ್ಷೇಮದ ವಿಚಾರವಂತೂ ಮೊದಲಿಗೇ ಬರುತ್ತಿತ್ತು. ಈ 'ಯೋಗಕ್ಷೇಮ' ಎನ್ನುವುದು ಎಲ್‌ಐಸಿಯ ಧ್ಯೇಯವಾಕ್ಯವೂ ಆಗಿದೆ. ಇದು ಗ್ರಾಹಕರಿಗೂ ಸಂಸ್ಥೆಗೂ ಸಂಬಂಧಿಸಿದ ವ್ಯವಹಾರಗಳ ನಿಲುವನ್ನು ಸೂಕ್ಷ್ಮವಾಗಿ ವ್ಯಕ್ತಪಡಿಸುತ್ತದೆ. ಯೋಗ–ಕ್ಷೇಮ ಎನ್ನುವ ಪದ ಬಹಳ ಪ್ರಾಚೀನವಾದದ್ದು. ಇದು ವೇದದ ರಾಷ್ಟ್ರ ಶುಭಾಶಂಸನದಲ್ಲಿ ಬರುತ್ತದೆ. ಅಲ್ಲಿರುವ ಮಾತು 'ಯೋಗಕ್ಷೇಮೋ ನಃ ಕಲ್ಪತಾಮ್' ಎಂದಿದೆ.

ಹಿಂದಿನ ಕಾಲದಲ್ಲಿ ಇಷ್ಟಮಿತ್ರರೋ ಹಿತೈಷಿಗಳೋ ಪರಿಚಿತರೋ ಎದುರಾದಾಗ ಪರಸ್ಪರ ಯೋಗಕ್ಷೇಮವನ್ನು ವಿಚಾರಿಸುತ್ತಿದ್ದರಷ್ಟೆ. ಅದು ಆಗಿನ ಕಾಲಕ್ಕೆ ಶಿಷ್ಟಾಚಾರವಾಗಿತ್ತು. ಪರಸ್ಪರ ಕಷ್ಟಸುಖಗಳನ್ನು ಹೇಳುವುದಕ್ಕೂ ಕೇಳುವುದಕ್ಕೂ ಇದು ಬಳಕೆಯಾಗುತ್ತಿತ್ತು. ಇದು ಮಾನವ ಸ್ವಭಾವವನ್ನೂ ಪೂರ್ವಚರಿತ್ರೆಯನ್ನೂ ಅಯಾಚಿತವಾಗಿ ದರ್ಶನ ಮಾಡಿಸುತ್ತಿತ್ತು. ಭಗವದ್ಗೀತೆಯಲ್ಲಿ ಬರುವ–

ಅನನ್ಯಾಶ್ಚಿಂತಯಂತೋ ಮಾಂ
ಯೇ ಜನಾಃ ಪರ್ಯುಪಾಸತೇ!
ತೇಷಾಂ ನಿತ್ಯಭಿಯುಕ್ತಾನಾಂ
ಯೋಗಕ್ಷೇಮಂ ವಹಾಮ್ಯಹಮ್!! 9.22

'ಯಾರು ನನ್ನನ್ನು ಅನನ್ಯವಾಗಿ ಧ್ಯಾನಿಸುತ್ತ, ನಿರಂತರವಾಗಿ ಸೇವೆ ಮಾಡುತ್ತ ಸಂತತಸಂಗದಲ್ಲಿ ಇರುವವರ ಯೋಗಕ್ಷೇಮವನ್ನು ನಾನೇ ನೋಡಿಕೊಳ್ಳುತ್ತೇನೆ' ಎಂದಿದೆ. ಇಲ್ಲಿ ಯೋಗ–ಕ್ಷೇಮ ಎಂಬ ಎರಡು ಪದಗಳಿವೆಯಷ್ಟೆ. ಯೋಗ ಎಂದರೆ ಗಳಿಕೆಯೆಂದೂ ಕ್ಷೇಮ ಎಂದರೆ ಉಳಿಕೆಯೆಂದೂ ಅರ್ಥ. ಈಗ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೇಳುವ 'ಯೋಗ' ಒಂದಿದೆಯಷ್ಟೆ. ಅದು ಇಲ್ಲಿಯ ಅರ್ಥಕ್ಕೆ ಹೊಂದುವುದಿಲ್ಲ. ಅದೇ ಬೇರೆ ಅರ್ಥ; ಇದೇ ಬೇರೆ ಅರ್ಥ.

ಗೀತೆಗಿಂತ ಮೊದಲು ತೈತ್ತಿರೀಯೋಪನಿಷತ್ತಿನಲ್ಲಿ 'ಯೋಗಕ್ಷೇಮ' ಎಂಬ ಸಮಸ್ತಪದವು ಬಳಕೆಗೊಂಡಿತ್ತು. 'ಕ್ಷೇಮ ಇತಿ ವಾಚಿ / ಯೋಗಕ್ಷೇಮ ಇತಿ ಪ್ರಾಣಾಪಾನಯೋಃ'. ಇದಕ್ಕೆ ಆಚಾರ್ಯ ಶಂಕರ ಭಗವತ್ಪಾದರ ವ್ಯಾಖ್ಯಾನ ಹೀಗುಂಟು: 'ಯೋಗೋ ಅಪ್ರಾಪ್ತಸ್ಯ ಪ್ರಾಪಣಮ್; ಕ್ಷೇಮಃ ತದ್ರಕ್ಷಣಮ್' ಎಂದು ಗೀತಾಭಾಷ್ಯದಲ್ಲಿದ್ದರೆ; 'ಯೋಗೋ ಅನುಪಾತ್ತಸ್ಯ ಉಪಾದಾನಂ ಕ್ಷೇಮೋ ನಾಮ ಉಪಾತ್ತಪರಿರಕ್ಷಣಮ್' ಎಂದು ಉಪನಿಷದ್ಭಾಷ್ಯದಲ್ಲುಂಟು. ಈ ಎರಡೂ ಕಡೆಯ ಮಾತುಗಳ ಅರ್ಥ ಒಂದೇ. ನಮ್ಮ ಬದುಕಿನಲ್ಲಿ ಈವರೆಗೂ ಪಡೆಯದೇ ಇರುವುದನ್ನು ಪಡೆಯುವುದು, ಗಳಿಸದೆ ಇರುವುದನ್ನು ಗಳಿಸುವುದೆಂದು ಯೋಗಕ್ಷೇಮದ ಅರ್ಥ. ನಾವು ಗಳಿಸುತ್ತೇವೆ, ಅದನ್ನು ಕಾಪಾಡಿಕೊಳ್ಳುವುದು ಅಷ್ಟೇ ಮುಖ್ಯ. ಅದು ಯೋಗ. ಇನ್ನು ಗಳಿಸಿದ್ದನ್ನು ಉಳಿಸಿಕೊಳ್ಳುವುದು ಕ್ಷೇಮದ ಭಾಗವೇ. ಇದು ನಮ್ಮ ಬದುಕಿನ ಸಾರಸ್ವರೂಪವಾಗಿತ್ತು. ಹೊಂದಿಸುವುದು 'ಯೋಗ' ಎಂದೆನಿಸಿಕೊಂಡರೆ; ಕೆಡುಕನ್ನು ದೂರಮಾಡಿಕೊಳ್ಳುವುದೇ 'ಕ್ಷೇಮ'. ಇದು ಪರದ ಚಿಂತನೆಗಿಂತ ಇಹದ ಚಿಂತನೆಯನ್ನು ನಮ್ಮ ಮುಂದಿಡುತ್ತದೆ. ನಮ್ಮ ಕನ್ನಡ ಕಾವ್ಯಗಳಲ್ಲೂ ಇದೇ ಅರ್ಥ ಬರುವ ಹಲವಾರು ವಿವರಣೆಗಳೂ ಪ್ರಸಂಗಗಳೂ ಉಂಟು.

ಮಹಾಭಾರತದ 'ಶಾಂತಿಪರ್ವ'ದಲ್ಲಿ ರಾಜನ ಬೊಕ್ಕಸಕ್ಕೆ ಕನ್ನಹಾಕಿ ಖಜಾನೆಯ ಕ್ಷೇಮವನ್ನು ಕೆಡಿಸುವ ವ್ಯಕ್ತಿಗಳ ಸ್ವಾರಸ್ಯಪೂರ್ಣವಾದ ಕಥೆಯುಂಟು. "ಕ್ಷೇಮದರ್ಶಿ ಎನ್ನುವ ರಾಜ ಕೋಸಲದೇಶವನ್ನು ಆಳುತ್ತಿದ್ದ. ಆತನ ಮಂತ್ರಿಗಳೂ ಅಧಿಕಾರಿಗಳೂ ಭ್ರಷ್ಟರಾಗಿದ್ದರು. ಅವರು ರಾಜನ ಖಜಾನೆಗೆ ನಷ್ಟವನ್ನು ಉಂಟುಮಾಡುತ್ತಿದ್ದರು. ಇದರ ರಹಸ್ಯ ತಿಳಿಯಲು ಕಾಲಕವೃಕ್ಷೀಯ ಎಂಬ ಮುನಿ, ಕಾಗೆಯೊಂದನ್ನು ಪಂಜರದಲ್ಲಿ ಇಟ್ಟುಕೊಂಡು ಜನರ ಬಳಿಗೆ ಹೋಗಿ, 'ಈ ಕಾಗೆಯು 'ವಾಯಸೀವಿದ್ಯೆ'ಯನ್ನು ಪಡೆದಿದೆ. ಇದರ ತಿಳಿವಳಿಕೆಯನ್ನು ಪಡೆದುಕೊಳ್ಳಿ' ಎಂದು ಹೇಳಿ ಜನರ ಅಭಿಪ್ರಾಯವನ್ನು ಪಡೆದ. ಅನಂತರ ಕ್ಷೇಮದರ್ಶಿ ರಾಜನ ಬಳಿಹೋಗಿ, 'ಈ ಕಾಗೆಗೆ ಎಲ್ಲ ರಹಸ್ಯಗಳು ತಿಳಿದಿವೆ. ನಿನ್ನ ಸುತ್ತಮುತ್ತ ಇರುವ ಭ್ರಷ್ಟರ ಹೆಸರನ್ನು ಇದು ಹೇಳುತ್ತದೆ. ಇದು ಎಂದೂ ಸುಳ್ಳು ಹೇಳುವುದಿಲ್ಲ' ಎಂದು ರಾಜನ ಪರಿವಾರದ ಎದುರಿಗೆ ಹೇಳಿ, ಕಾಗೆಯನ್ನು ರಾಜನಿಗೆ ಒಪ್ಪಿಸಿದ. ರಾಜನ ಪರಿವಾರದವರಿಗೆ ಭಯ ಉಂಟಾಗತೊಡಗಿತು. ರಾಜ ರಾತ್ರಿ ನಿದ್ರೆಹೋದ; ಮುನಿಯೂ ನಿದ್ರೆ ಹೋದ. ಆ ರಾತ್ರಿ ಪರಿವಾರದ ಭ್ರಷ್ಟರು ಕಾಗೆಗೆ ಬಾಣ ಚುಚ್ಚಿ ಸಾಯಿಸಿದರು. ಬೆಳಗ್ಗೆ ರಾಜ ಮತ್ತು ಮುನಿ ಪಂಜರದಲ್ಲಿ ಸತ್ತುಬಿದ್ದಿರುವ ಕಾಗೆಯನ್ನು ಕಂಡರು. ತನ್ನ ಸುತ್ತ–ಮುತ್ತ ಭ್ರಷ್ಟರಿರುವುದು ರಾಜನಿಗೆ ಮನವರಿಕೆ ಆಯಿತು. ಆಗ ರಾಜ ಭ್ರಷ್ಟರನ್ನು ಕಿತ್ತುಹಾಕಿ ನಾಡಿನ ಸಂಪತ್ತನ್ನು ಉಳಿಸಿಕೊಂಡ". ಇದು ಕ್ಷೇಮದರ್ಶಿ ರಾಜನೊಬ್ಬನ ಕಥೆ.

ನಮಗೆ 'ಯೋಗ' ಎಷ್ಟು ಮುಖ್ಯವೋ 'ಕ್ಷೇಮ'ವೂ ಅಷ್ಟೇ ಮುಖ್ಯ. ಆದರೆ, ವರ್ತಮಾನದ ವಿದ್ಯಮಾನಗಳನ್ನು ನೋಡಿದರೆ, 'ಯೋಗಕ್ಷೇಮ'ವೆಂಬುದು ಶಬ್ದಸಂಕೇತದಲ್ಲಿ ಉಳಿದಿದೆಯೇ ಹೊರತು; ಅದು ಬದುಕಿನ, ನಾಡಿನ ಭಾಗವಾಗಿಲ್ಲ. ಇದು ನಮ್ಮ ದುರಂತವಲ್ಲದೆ ಇನ್ನೇನು?

■ ಪುರಂಜೀವಿ

## ಮಾತೇ ಮುತ್ತು

- ನೂರು ಸಾರಿ ಸೋತಿದ್ದರೇನಂತೆ?
ನೂರೊಂದು ಸಾರಿ ಬಿದ್ದಿದ್ದರೇನಂತೆ?
ಸೋಲು ಗೆಲುವಿಗೆ ಮೆಟ್ಟಿಲು
ಬಿದ್ದರಲ್ಲವೆ ಮರಳಿ ಏಳುವುದು!
ಬೀಳದಿದ್ದವನು ಎಂದೂ ಮೇಲೆದ್ದವನಲ್ಲ.
–ಕುವೆಂಪು

- ಗೆಲ್ಲುತ್ತೇನೆ ಎಂದು ಬಂದವನು ಸೋಲುವುದಕ್ಕೂ ಸಿದ್ಧನಿರಬೇಕು.
–ದ.ರಾ. ಬೇಂದ್ರೆ

- ಯಾರು ಸಾವಿಗೆ ಅಂಜುವುದಿಲ್ಲವೋ ಅಂಥವ ಬದುಕಿಗೆ ಹೆದರಬೇಕಿಲ್ಲ, ಅಂಥವನು ಬದುಕಬಲ್ಲ.
–ಶಿವರಾಮ ಕಾರಂತ

- ಜನರಿಗೆ ತಮ್ಮ ಹಕ್ಕು, ಹೊಣೆಗಾರಿಕೆಯ ಅರಿವು ಇಲ್ಲದೆ ಹೋದರೆ ಪ್ರಜಾಪ್ರಭುತ್ವ ಕೇವಲ ನಕಲಿ ಮಾಲು.
–ಗೋಪಾಲಕೃಷ್ಣ ಅಡಿಗ

- ನಮ್ಮ ಹಣೆಬರಹವನ್ನು ನಿರ್ಧರಿಸುವ ಜವಾಬ್ದಾರಿ ನಕ್ಷತ್ರಗಳ ಮೇಲಿಲ್ಲ. ಅದು ನಮ್ಮ ಮೇಲೇನೇ ಇದೆ.
–ವಿಲಿಯಂ ಶೇಕ್ಸ್‌ಪಿಯರ್

- ನಿನ್ನ ಮನೆ ಶುದ್ಧವಾಗಿಲ್ಲದಿದ್ದಾಗ ಪಕ್ಕದ ಮನೆಯ ಬಗ್ಗೆ ಕುಂದು ಹೇಳಬೇಡ.
–ಚೀನಾ ಗಾದೆ

- ಜ್ಞಾನವು ಸುಮ್ಮನೆ ನಮ್ಮ ಕಡೆ ಬರುವುದಿಲ್ಲ. ಅದು ಮಹಾನ್ ಪ್ರಯತ್ನದ ಫಲ.
–ಬಿ.ಆರ್. ಅಂಬೇಡ್ಕರ್

- ನೀವು ತಿಳಿದಿದ್ದನ್ನು ನಿಮ್ಮ ಭಾಷೆಯಲ್ಲಿ ಇತರರಿಗೆ ಹೇಳಲು ಸಾಧ್ಯವಿಲ್ಲ ಎಂದರೆ ಅದರ ಅರ್ಥ ಇಷ್ಟೆ– 'ನೀನು ಏನೂ ವಿಷಯ ತಿಳಿದೇ ಇಲ್ಲ.
–ಪೂರ್ಣಚಂದ್ರ ತೇಜಸ್ವಿ

- ರಕ್ತವಿಲ್ಲದೆ ದೇಹವು ಹೇಗೆ ಬದುಕಲು ಸಾಧ್ಯವಿಲ್ಲವೋ ಹಾಗೆಯೇ ಶ್ರದ್ಧೆ ಮತ್ತು ಪ್ರಾರ್ಥನೆಗಳಿಲ್ಲದೆ ಆತ್ಮವೂ ಕೂಡ ಬದುಕಲು ಸಾಧ್ಯವಿಲ್ಲ.
–ಮಹಾತ್ಮ ಗಾಂಧಿ